KATK010056102023

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ಸತ್ರ ಮೊಕದ್ದಮೆ ಸಂ.125/2023</u>**

ಪ್ರಾ.ಸಾ. : **8**

ದೋ.ಸಾ. : **14**

ದಿ.**29.04.2025**

ಹೆಸರು : ಅಶ್ವತ್ಥ ಕುಮಾರ್

ತಂದೆಯ ಹೆಸರು : ಲೇಟ್ ರಂಗಾಚಾರ್

ವಯಸ್ಸು : **60** ವರ್ಷ

ಉದ್ಯೋಗ : ಕಾರ್ಪೆಂಟರ್ ಕೆಲಸ

ವಾಸಸ್ಥಳ : ತಿಮ್ಮಸಂದ್ರ, ತುಮಕೂರು ತಾಲ್ಲೂಕು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>**

**1.** ನಿಶಾನೆ ಪಿ8 ರಲ್ಲಿ ನನ್ನ ಸಹಿ ಇದೆ. ನನ್ನ ಸಹಿಯನ್ನು ನಿಶಾನೆ ಪಿ8(ಬಿ) ಎಂದು ಗುರುತಿಸಲಾಯಿತು. ಆ ಸಹಿಯನ್ನು ದಿ.22.03.2023 ರಂದು ಹೆಬ್ಬೂರು ಪೋಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ಪೋಲೀಸರು ಮಹಜರ್ ಮಾಡುವ ಸಲುವಾಗಿ ನನ್ನನ್ನು ಠಾಣೆಗೆ ಕರೆಸಿದ್ದರು. ಅಲ್ಲಿ ಬಟ್ಟೆ ಅಮಾನತ್ತುಪಡಿಸಿಕೊಂಡು ಮಹಜರ್ ಮಾಡಿದರು. ಗಲಾಟೆ ವಿಚಾರವಾಗಿ ಬಟ್ಟೆ ಅಮಾನತ್ತುಪಡಿಸಿಕೊಂಡರು. ಆ ಸಮಯದಲ್ಲಿ ಪೋಲೀಸರು ನನಗೆ ನೋಟೀಸ್ ಕೊಟ್ಟಿದ್ದರು. ಆ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಶಾನೆ ಪಿ26 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ26(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಫೋಟೋದಲ್ಲಿ ನಾನು ಇದ್ದೇನೆ ಮತ್ತು ನಮ್ಮ ಪಕ್ಕದ ಊರಿನ ರಂಗಸ್ವಾಮಿ ಇದ್ದಾರೆ. ಆ ಫೋಟೋದಲ್ಲಿ ಇನ್ನೊಬ್ಬ ವ್ಯಕ್ತಿ ಸ್ವಾಮಿ ಇದ್ದಾನೆ. ಯಾರ ಬಟ್ಟೆ ಹಾಜರು ಮಾಡಿದ್ದರು ಎಂದು ಈಗ ನೆನಪಿಲ್ಲ. ಆ ಫೋಟೋವನ್ನು ಈಗ ನೋಡುತ್ತಿದ್ದು

ಅದನ್ನು ನಿಶಾನೆ ಪಿ27 ಎಂದು ಗುರುತಿಸಲಾಯಿತು. ಆ ದಿನ ಹಾಜರು ಮಾಡಿದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನನಗೆ ತೋರಿಸಿದ ಬಟ್ಟೆಗಳಲ್ಲಿ ಅಂಟಿಸಿದ ಚೀಟಿಗಳಲ್ಲಿ ನನ್ನ ಸಹಿ ಇದೆ. ಆ ದಿನ ಅಮಾನತ್ತುಪಡಿಸಿಕೊಂಡ ಬಟ್ಟೆಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಮು ಮಾ 2 ರಿಂದ 4 ಎಂದು ಗುರುತಿಸಲಾಗಿದೆ.

(ಈ ಸಾಕ್ಷಿಯು ಮಹಜರಿಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು/ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ಮಹಜರಿಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

**2.** ಆ ದಿನ ಬಟ್ಟೆಯನ್ನು ಹಾಜರು ಮಾಡಿದ ವ್ಯಕ್ತಿಯ ಹೆಸರು ಶಿವಸ್ವಾಮಿ ಅಲಿಯಾಸ್ ಸ್ವಾಮಿ ಎಂದರೆ ನಿಜ. ಅಣ್ಣಪ್ಪ ಸ್ವಾಮಿ ಅಲಿಯಾಸ್ ಅಣ್ಣಪ್ಪ ಅಲಿಯಾಸ್ ಅರುಣ ತನಗೆ ಹೊಡೆದಿದ್ದರಿಂದ ಬಟ್ಟೆಗೆ ರಕ್ತವಾಗಿದೆ ಎಂದು ಹೇಳಿ ಶಿವಸ್ವಾಮಿ ಅಲಿಯಾಸ್ ಸ್ವಾಮಿ ಬಟ್ಟೆ ಹಾಜರುಮಾಡಿದರು ಎಂದರೆ ನಿಜ. ತನಗೆ ಹಲ್ಲೆ ಮಾಡಿದಾಗ ಧರಿಸಿದ್ದ ಬಟ್ಟೆಗಳನ್ನೇ ಶಿವಸ್ವಾಮಿ ಹಾಜರು ಮಾಡಿದ್ದು, ಅವುಗಳನ್ನೇ ಪೋಲೀಸರು ಅಮಾನತ್ತುಪಡಿಸಿಕೊಂಡಿದ್ದು ಎಂದರೆ ನಿಜ.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

**3.** ಬಟ್ಟೆಯಲ್ಲಿ ರಕ್ತವಾಗಿತ್ತು, ಎಷ್ಟು ಕಡೆ ರಕ್ತವಾಗಿತ್ತು ಎಂದು ನಾನು ಗಮನಿಸಿಲ್ಲ. ಆ ಬಟ್ಟೆಗಳನ್ನು ಯಾರು ತಂದಿದ್ದರು ಎಂದು ನನಗೆ ಗೊತ್ತಿಲ್ಲ. ಮಹಜರಿನಲ್ಲಿ ಏನು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ನನಗೆ ಓದಲು ಬರುವುದಿಲ್ಲ. ರಕ್ತ ಆಗಿದ್ದನ್ನು ಮಹಜರಿನಲ್ಲಿ ಬರೆದಿದ್ದು ಸ್ವಲ್ಪ ಕಂಡಿತು. ಅಣ್ಣಪ್ಪ ಸ್ವಾಮಿ ಅಲಿಯಾಸ್ ಅಣ್ಣಪ್ಪ ಅಲಿಯಾಸ್ ಅರುಣ ತನಗೆ ಹೊಡೆದಿದ್ದರಿಂದ ಬಟ್ಟೆಗೆ ರಕ್ತವಾಗಿದೆ ಎಂದು ಹೇಳಿ

ಶಿವಸ್ವಾಮಿ ಅಲಿಯಾಸ್ ಸ್ವಾಮಿ ಬಟ್ಟೆ ಹಾಜರುಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಪೋಲೀಸ್ ಠಾಣೆಗೆ ನಾಗರಾಜಾಚಾರ್ ಕರೆದುಕೊಂಡು ಹೋಗಿದ್ದರು. ನಾಗರಾಜಾಚಾರ್ ನನ್ನ ಸಂಬಂಧಿ. ನಾಗರಾಜಾಚಾರ್ ನನ್ನ ಸಂಬಂಧಿಯಾಗಿದ್ದರಿಂದ ಅವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ, ಮು ಮಾ 2 ರಿಂದ 4 ನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು